ನಾಂದಿಪದ



ಕಲೆ: ಬಸವರಾಜ ಕಲೆಗಾರ

# ಅಪೂರ್ವ ನೆನಪು, ಅನನ್ಯ ಬದುಕು

ಬೌದ್ಧಿಕ ಚಟುವಟಿಕೆಗಳನ್ನು ಅನುಮಾನದಿಂದ ನೋಡುವ ಪ್ರವೃತ್ತಿಯ ಜೊತೆಗೆ, ಬೌದ್ಧಿಕ ಪರಂಪರೆಯ ಬಗೆಗಿನ ಅರಿವೂ ಕಡಿಮೆ ಆಗುತ್ತಿದೆ ಎನ್ನುವ ಆತಂಕ ದಟ್ಟವಾಗುತ್ತಿರುವ ದಿನಗಳಿವು. ಬುದ್ಧಿವಂತಿಕೆಯ ಸಾಧ್ಯತೆಗಳನ್ನು ಯಂತ್ರಗಳಿಗೆ ಬಿಟ್ಟುಕೊಡುವಂತಹ ಹಾಗೂ ನಮ್ಮ ಪರವಾಗಿ ಯಂತ್ರಗಳೇ ಚಿಂತನೆ ಮಾಡುವಾಗ ಬೌದ್ಧಿಕತೆಗೆ ವಿಶೇಷ ಮಹತ್ವವಿಲ್ಲ ಎನ್ನುವಂತಹ ಮನೋಧರ್ಮ ಸಹಜವಾಗುತ್ತಿರುವ ಸಂದರ್ಭ ಇಂದಿನದು. ಆದರೆ, ಮನುಷ್ಯನ ಬೌದ್ಧಿಕತೆಗೆ ಇರುವ ವಿವೇಕ, ಹೊಳಪು, ಹೊಳಹು, ಆರ್ದ್ರತೆ ಹಾಗೂ ಸಂಸ್ಕೃತಿಯನ್ನು ಕಟ್ಟುವ ಜೀವಶಕ್ತಿಗೆ ಪರ್ಯಾಯ ಸಾಧ್ಯವಿಲ್ಲ ಎನ್ನುವುದಕ್ಕೆ ನಿದರ್ಶನರೂಪದ ದಾರ್ಶನಿಕ ಪ್ರತಿಭೆಗಳು ನಮ್ಮ ಮಣ್ಣಿನಲ್ಲಿ ಅರಳಿವೆ. ಅಂಥದೊಂದು ಅನನ್ಯ ಪ್ರತಿಭೆ, ಡಿ.ಆರ್. ನಾಗರಾಜ್. ಆಧುನಿಕ ಕರ್ನಾಟಕದ ಪ್ರಮುಖ ಚಿಂತಕರಲ್ಲಿ ಒಬ್ಬರಾದ ಡಿಆರ್‌ಎನ್, ತಮ್ಮ ಬದುಕಿನ ಅಲ್ಪ ಸಮಯದಲ್ಲಿಯೇ ಮಹತ್ವದ್ದನ್ನು ಸಾಧಿಸಿದವರು, ಕನ್ನಡದ ಚಿಂತನಾದ್ರವ್ಯವನ್ನು ಆಧರಿಸಿಯೇ ವಿಶ್ವನೆಲೆಗೆ ಸಂದವರು. ಕನ್ನಡದ ಸಹೃದಯರ ಆರ್ದ್ರಗೌರವಕ್ಕೆ, ಮುಖ್ಯವಾಗಿ ಹೊಸ ತಲೆಮಾರಿನ ಓದುಗರ ಕುತೂಹಲ–ಅಭಿಮಾನಕ್ಕೆ ಪಾತ್ರರಾಗಬೇಕಾದ ಅಸಾಧಾರಣ ಲೇಖಕನ ಪ್ರತಿಭಾಪ್ರಭಾವಲಯದ ಸಾಧ್ಯತೆಗಳನ್ನು ಗುರ್ತಿಸುವ ಬರಹ ‘ಡಿ.ಆರ್. ನಾಗರಾಜರ ಬೌದ್ಧಿಕ ಜೀವನಚರಿತ್ರೆ’ ಈ ಸಂಚಿಕೆಯ ವಿಶೇಷಗಳಲ್ಲೊಂದು.

ಒಡಿಯಾ ಭಾಷೆಯ ಪ್ರಮುಖ ಬರಹಗಾರ್ತಿ ಪ್ರತಿಭಾ ರಾಯ್ ಸಂದರ್ಶನ ಈ ಸಂಚಿಕೆಯ ಮತ್ತೊಂದು ವಿಶೇಷ. ದೇಸಿಭಾಷೆಯಲ್ಲಿ ಬರೆದೇ, ದೇಶದ ಮುಖ್ಯ ಲೇಖಕಿಯರಲ್ಲೊಬ್ಬರಾಗಿ ರೂಪುಗೊಂಡ ಪ್ರತಿಭಾ ಅವರ ಸಾಹಿತ್ಯ ಸಾಧನೆ ಬೆರಗೊಳಿಸುವಂತಹದ್ದು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರೂ ಆದ ಪ್ರತಿಭಾ ಅವರ ಬದುಕು–ಬರಹ–ಸಾಧನೆಯನ್ನು ಪರಿಚಯಿಸುವ ಸಂದರ್ಶನ ‘ಮಯೂರ’ದ ಓದುಗರಿಗೆ ಇಷ್ಟವಾಗುತ್ತದೆನ್ನುವ ನಂಬಿಕೆ ನಮ್ಮದು. ಸಮಕಾಲೀನ ಕನ್ನಡ ಸಾಹಿತ್ಯದ ಕುತೂಹಲಿಗಳಿಗಾಗಿ ಕಾಳಜಿಯಿಂದ ಆಯ್ದು ವಿನ್ಯಾಸಗೊಳಿಸಿರುವ ಕಥೆ, ಕವಿತೆ, ಪ್ರಬಂಧ, ಪುಸ್ತಕ ವಿಮರ್ಶೆಗಳನ್ನು ಒಳಗೊಂಡಿರುವ ಈ ಸಂಚಿಕೆಯನ್ನು ಸಹೃದಯರು ಎಂದಿನಂತೆ ಮೆಚ್ಚುತ್ತಾರೆನ್ನುವ ವಿಶ್ವಾಸ ನಮ್ಮದು.

**ಮಯೂರ ಬಳಗ**
editormy@mayura.co.in